# ವೈಭೋಗದ ನೆರಳಿನಾಚೆ ನರಳಿಕೆ ದನಿಗಳ ಅನುರಣನ

ಪ್ರಿಯಾಂಕಾ ಅಗರ್ವಾಲ್ ಭೇಟಿಯ ಗುಂಗಿನಲ್ಲಿದ್ದವನನ್ನು ಮೊಬೈಲ್‌ಗೆ ಬಂದ ಕರೆಯೊಂದು ಎಚ್ಚರಿಸಿತು. 'ಹಲೋ' ಎಂದು ಫೋನ್ ರಿಸೀವ್ ಮಾಡಿಕೊಂಡಿದ್ದ ಆಸ್ಕರ್ ವೈಲ್ಡ್.

'ಏನೋ ಸೋನಾ, ಹೇಗಿದ್ದೀಯಾ?' ಯುವತಿಯೊಬ್ಬಳ ಮಾದಕತೆ ತುಂಬಿಕೊಂಡ ಸ್ವಲ್ಪ ಗಡುಸಾದ ಧ್ವನಿ.

'ಯಾರು ನೀವು, ಗೊತ್ತಾಗಲಿಲ್ಲ' ಮೃದುವಾಗಿಯೇ ಕೇಳಿದ್ದ.

'ಅಯ್ಯೋ ಗುಲ್ಡು, ನೀನೇನೂ ಬದಲಾದಂತೆ ಕಾಣುತ್ತಿಲ್ಲ. ನಾನು ಕಣೋ ಅಂಜಲಿ, ಅಂಜಲಿ ದೇಸಾಯಿ, ಲಂಡನ್‌ನಿಂದ ಮಾತಾಡ್ತಾ ಇದೀನಿ' ಅದೇ ತಮಾಷೆಯ ಮಾತುಗಳು.

'ಹಾಯ್, ವ್ಹಾಟ್ ಎ ಸರ್‌ಪ್ರೈಸ್. ನಾನು ಚೆನ್ನಾಗಿ ಇದೀನಿ, ಹೇಗಿದ್ದೀಯಾ ನೀನು?' ಸಹಜ ಕುತೂಹಲದಿಂದಲೇ ಮಾತನಾಡಿದ್ದ.

'ಹೋದ ವಾರ ಸಾಯಿಪ್ರಭೆ ಫೋನ್ ಮಾಡಿದ್ಲು. ಎಲ್ಲಾ ಸಂಗತಿಗಳನ್ನೂ ಹೇಳಿದ್ಲು. ತುಂಬಾ ಇಂಟರೆಸ್ಟಿಂಗ್ ಫೆಲೋ ಕಣೊ ನೀನು. ಎಂಥದ್ದೊ ವಿಚಿತ್ರ ಕನಸು ಬಿದ್ದು ಆಸ್ಕರ್ ವೈಲ್ಡ್ ಅಂತ ಹೆಸರು ಬದ್ಲಾಯಿಸಿಕೊಂಡಿದ್ದೀಯಂತೆ. ಇನ್ನೆಂಥ ಬೆಡಗಿನೋ ಅವಳು, ನಿನ್ನ ಕನಸಿಗೆ ಬಂದೋಳು. ನನಗಿಂತಲೂ ಫೇರ್ ಆಗಿದ್ಲಾ? ಇರಲಾರಳು ಬಿಡು. ನೀನು ಡಾಕ್ಟರೋ ಇಂಜಿನಿಯರೋ ಆಗ್ತೀಯ ಅಂದ್ಕೊಂಡಿದ್ದೆ. ನೀನು ನೋಡಿದ್ರೆ ಇಂಗ್ಲಿಷ್ ಲಿಟರೇಚರ್ ಎಂಎ ಓದಿ ಮುಗಿಸಿದ್ದೀಯಂತೆ. ದೊಡ್ಡ ಇಂಡಸ್ಟ್ರಿಯಲಿಸ್ಟ್ ವಂಶದ ಏಕೈಕ ಕುಡಿ. ಜಗತ್ತನ್ನು ಸುತ್ಕೊಂಡು ಜಾಲಿಯಾಗಿ ಇರೋದು ಬಿಟ್ಟು. ನಿನ್ನಂತೋನು ಶ್ರೀಮಂತರ ಮನೆಯಲ್ಲಿ ಹುಟ್ಟೋದೇ ವೇಸ್ಟ್' ನಗು ತುಂಬಿದ ಮಾತು.

'ಎಲ್ಲರ ಟೇಸ್ಟೂ ಒಂದೇ ತರ ಇರಲ್ವಲ್ಲಾ ಅಂಜಲಿ, ನೀನು ಬಿಡು – ಡೇರ್ ಅಂಡ್ ಡೆವಿಲ್' ಹಳೆಯ ಸಂಗತಿಗಳು ನೆನಪಾಗಿ ಹೇಳಿದ್ದ.

'ಅವತ್ತು ಐಸ್‌ಕ್ರೀಂ ಪಾರ್ಲರ್‌ನಲ್ಲಿ ನಿನಗೆ ಕೊಟ್ಟ ಕಿಸ್ಸನ್ನ ನಾನು ಇಷ್ಟು ವರ್ಷಗಳಾದರೂ ಮರೆತಿಲ್ಲ ನೋಡು. ಅಂದ ಹಾಗೆ ಸಾಯಿಪ್ರಭೆಯನ್ನು ಕೇಳಲು ನಿಮ್ಮ ಮನೆಯವರೆಲ್ಲ ಪೂನಾಗೆ ಹೋಗಿದ್ದಿರಂತೆ. ಅವಳೊಬ್ಬಳು ಬುದ್ಧಿಗೇಡಿ, ನಿನ್ನನ್ನೇ ಮದುವೆ ಮಾಡಿಕೊಂಡು ಹಾಯಾಗಿ ಇರಬಹುದಿತ್ತು. ಅಮೆರಿಕಕ್ಕೆ ಹಾರುತ್ತಾಳಂತೆ. ಈ ವಿದೇಶಿಯರಿಗೆ ಒಂದಿಷ್ಟು ಸೆಂಟಿಮೆಂಟ್ಸ್ ಕೂಡ ಇರೋದಿಲ್ಲ. ಸಾಯಿಪ್ರಭೆ ನನ್ನ ಬಗ್ಗೆ ಎಲ್ಲಾ ಹೇಳಿರಬೇಕಲ್ವಾ? ನನಗೆ ಇಲ್ಲೊಬ್ಬ ಒಳ್ಳೆ ಬಾಯ್‌ಫ್ರೆಂಡ್ ಇದ್ದ. ಅವನಿಗಾಗಿ ಎಷ್ಟೊಂದು ಖರ್ಚು ಮಾಡಿದೆ ಗೊತ್ತಾ. ವಾರದ ಹಿಂದೆ ಯಾವಳನ್ನೋ ಕಟ್ಟಿಕೊಂಡು ನೆದರ್‌ಲ್ಯಾಂಡ್ಸ್‌ಗೆ ಹೋಗಿಬಿಟ್ಟ ಹೇಳದೇ ಕೇಳದೆ. ನನಗೆ ಈಗಾಗಲೇ ಲಂಡನ್ ತುಂಬಾ ಬೋರ್ ಅನ್ನಿಸ್ತಾ ಇದೆ. ವಾಪಸ್ಸು ಬಂದು ಪೂನಾದಲ್ಲಿ ಸೆಟ್ಲ್ ಆಗೋಣ ಅಂತ ಡಿಸೈಡ್ ಮಾಡಿದ್ದೀನಿ ಫ್ಯಾಮಿಲಿಯೊಂದಿಗೆ. ಎಷ್ಟಾದರಾಗಲೀ, ನಮ್ಮ ಮುಂಬಯಿಯಲ್ಲಿ ಸಿಗುವಂತ ಮಜಾ ಮತ್ತು ಸುಖ ಜಗತ್ತಿನಲ್ಲಿ ಎಲ್ಲೂ ಸಿಗಲ್ಲ ಎಂಬ ಸತ್ಯ ನನಗೆ ಅನುಭವಕ್ಕೆ ಬಂದಿದೆ. ಬಂದಾಗ ಮುಂಬಯಿಯಲ್ಲಿ ಖಂಡಿತಾ ಸಿಗೋಣ. ಮೊಬೈಲ್ ನಂಬರ್ ಬದಲಾಯಿಸಿದರೆ ತಿಳಿಸಿಬಿಡು. ಒಂದು ವೇಳೆ ನೀನು ತಿಳಿಸದಿದ್ದರೂ ಸೀದಾ ಕಾರಲ್ಲಿ ಬಂದು ನಿನ್ನ ಆಸ್ಕರ್ ಟವರ್ಸ್ ಮುಂದೆ ಇಳಿಯೋದು ನಂಗೆ ಗೊತ್ತು. ಹ್ಯಾವ್ ಎ ನೈಸ್ ಡೇ ಡಿಯರ್' ಎಂದು ಮಾತು ಮುಗಿಸಿ ಫೋನ್ ಕಟ್ ಮಾಡಿದ್ದಳು. ಕ್ಷಣಕಾಲ ಆಸ್ಕರ್ ವೈಲ್ಡನಿಗೆ ಅವಳ ಮಾತುಗಳಿಂದ ಖುಷಿಯೆನಿಸಿದರೂ ಮರುಕ್ಷಣವೇ ಏಕೋ ಅನ್ಯಮನಸ್ಕನಾದ. ಐದು ನಿಮಿಷದಲ್ಲಿ ಮತ್ತೆ ಫೋನ್ ಮೊಳಗಿತ್ತು. ಈ ಬಾರಿ ಸ್ಕ್ರೀನ್ ಮೇಲೆ ಡಿಸ್‌ಪ್ಲೇ ಆಗುತ್ತಿದ್ದಿದ್ದು ತಾತ ಗುನ್ನಾಲಾಲನ ಹೆಸರು. ಏನಾದರೂ ಅರ್ಜೆಂಟ್ ಇದ್ದರೆ ಮಾತ್ರ ತಾತ ಫೋನ್ ಮಾಡುವುದು. ಕೂಡಲೇ ರಿಸೀವ್ ಮಾಡಿ 'ಹೇಳು ಗುನ್ನಾ?' ಎಂದು ಕೇಳಿದ್ದ.

'ಎಲ್ಲಿದ್ದೀಯಾ ಸೋನಾ?' ಧ್ವನಿಯಲ್ಲಿ ಆತಂಕವೇನೂ ಇರಲಿಲ್ಲ.

'ಸ್ನೇಹಿತರನ್ನು ಕಾಣಲು ದೊಂಬಿವಿಲಿಗೆ ಬಂದಿದ್ದೆ ಗುನ್ನಾ, ಇನ್ನೊಂದು ಗಂಟೆಯಲ್ಲಿ ಮನೆಗೆ ಬರುವೆ' ಎಂದಿದ್ದ.

